ಕ್ರಮ ಸಂ.	ತಾಲ್ಲೂಕು	ಹಂಚಲಾದ ಮನೆಗಳ ಸಂಖ್ಯೆ				
		1995-96		1996-97		
		ಗ್ರಾಮಾಂತರ	ಪಟ್ಟಣ	ಗ್ರಾಮಾಂತರ	ಪಟ್ಟಣ	ಒಟ್ಟು
1.	ಸಕಲೇಶಪುರ	217	120	102	1995-96 ನೇ ಸಾಲಿನ ಕಾರ್ಯಕ್ರಮ ಮುಂದುವರಿಸಲಾಗಿದೆ.	439
2.	ಆಲೂರು	138	-	71	-	209

ಸಕಲೇಶಪುರ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ 100 ಮನೆಗಳು ಸರ್ಕಾರದಿಂದ ಹಂಚಿಕೆಯಾಗಿರುತ್ತದೆ.

ಬಿ.ಟಿ.ಎಸ್. ಬಸ್ಸುಗಳ ಕುರಿತು

603 (775) ಶ್ರೀ.ಎಸ್. ರಾಜಣ್ಣ (ಭಾರತೀನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುಷ್ಪಕ್ ಬಸ್‌ಗಳನ್ನು ಸೇರಿ ಒಟ್ಟು ಎಷ್ಟು ಬಿ.ಟಿ.ಎಸ್. ಬಸ್‌ಗಳು ಪ್ರತಿ ದಿನ ಆಚರಣೆಯಾಗುತ್ತವೆ;

ಆ) ಸುಮಾರು ಎಷ್ಟು ಜನ ಪ್ರಯಾಣಿಕರು ಈ ವಾಹನಗಳಲ್ಲಿ ಪ್ರತಿದಿನ ಸಂಚರಿಸುತ್ತಾರೆ;

ಇ) ಈಗಿರುವ ಬಸ್‌ಗಳು ಬೆಂಗಳೂರಿನ ಪ್ರಯಾಣಿಕರಿಗೆ ಸಾಕಾಗುವುದಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಾದರೆ ಖಾಸಗಿ ಬಸ್ ಮಾಲೀಕರಿಗೆ ಕೆಲವೊಂದು ನಿಗಧಿತ ಮಾರ್ಗದಲ್ಲಿ ವಾಹನಗಳನ್ನು ಓಡಿಸಲು ಅನುಮತಿ ಕೊಡಲಾಗುವುದೇ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಪುಷ್ಪಕ್ ಬಸ್‌ಗಳನ್ನು ಸೇರಿ ಒಟ್ಟು 1805 ವಾಹನಗಳು ಪ್ರತಿ ದಿನ ಆಚರಿಸುತ್ತಿವೆ. ಇದರಲ್ಲಿ 237 ಪುಷ್ಪಕ್ ವಾಹನಗಳು.

ಆ) ಸುಮಾರು 24 ಲಕ್ಷ ಜನ ಪ್ರತಿ ದಿನ ಬಿ.ಟಿ.ಎಸ್ ಬಸ್‌ಗಳಲ್ಲಿ ಪ್ರಯಾಣಿಸುತ್ತಾರೆ.

ಇ) ಹೌದು.

ಈ) ಖಾಸಗಿ ಬಸ್ ಮಾಲೀಕರ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಬೆಂಗಳೂರು ನಗರ ಸಾರಿಗೆಯಲ್ಲಿ ಆಚರಿಸಲು ಪ್ರಸ್ತಾವನೆ ನಡೆದಿದೆ.

ತೋಟಗಾರಿಕೆ ಇಲಾಖೆಯ ಉದ್ಯಾನವನಗಳು

604 (528) ಶ್ರೀ ಅಲ್ಲಂ ವೀರಬದ್ರಪ್ಪ, (ಕುರುಗೂಡು): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಿಂದ ನಿರ್ವಹಿಸುತ್ತಿರುವ ರಾಜ್ಯಾದ್ಯಂತ ಇರುವ ಉದ್ಯೋಗ ವನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು);

ಆ) ಈ ಉದ್ಯಾನವನಗಳಿಗೆ 1996-97ನೇ ಸಾಲಿನಲ್ಲಿ ಇದುವರೆವಿಗೂ ಖರ್ಚು ಮಾಡಿರುವ ಹಣದ ವಿವರ (ವಿವರಗಳ ಸಹಿತ ಮಂಡಿಸುವುದು);

ಇ) ಸರ್ಕಾರದ ಮತಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ ಯಾವುದಾದರು ಹೊಸ ಉದ್ಯಾನವನ ನಿರ್ಮಿಸಲಾಗುವುದೆ;

ಈ) ಇಲ್ಲದಿದ್ದರೆ ಬಳ್ಳಾರಿ ಜಿಲ್ಲೆಯಲ್ಲಿ 1997-98ನೇ ಸಾಲಿಗೆ ಬೃಹತ್ ಉದ್ಯಾನವನ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆ ಮತಿಯಿಂದ ಅಭಿವೃದ್ಧಿ ಪಡಿಸಿ ನಿರ್ವಹಿಸಲಾಗುತ್ತಿರುವ 50 ಉದ್ಯಾನವನಗಳು ಕೆಳಕಂಡಂತೆ ಇರುತ್ತದೆ

1. ಬೆಂಗಳೂರು ನಗರ ಜಿಲ್ಲೆ
   1) ಲಾಲ್ ಬಾಗ್ ಸಸ್ಯತೋಟ
   2) ಕಬ್ಬನ್ ಉದ್ಯಾನವನ,
   3) ವಿಧಾನ ಸೌಧ ಆವರಣ
   4) ಸೌರವ್ಯೂಹ ಭವನ ಉದ್ಯಾನವನ
   5) ಎಂ.ಎನ್.ಕೆ. ಉದ್ಯಾನವನ
   6) ಲೋಕಸೇವಾ ಆಯೋಗದ ಆವರಣ ಹಾಗೂ ಶಾಸಕರ ಭವನ
   7) ರಾಜಭವನ ಉದ್ಯಾನವನ
   8) ಮಾನ್ಯ ಮಂತ್ರಿಗಳ ಮನೆಗಳ ಕೈತೋಟ ಹಾಗೂ ಉದ್ಯಾನವನ
   9) ಗಣ್ಯ ವ್ಯಕ್ತಿಗಳ ಅಧಿಕೃತ ನಿವಾಸ ಕೈತೋಟ ಹಾಗೂ ಉದ್ಯಾನವನ
   10) ಎಲ್.ಆರ್.ಡಿ.ಇ. ಉದ್ಯಾನವನ